ಕೈಗೊಂಡು ಸಾಫ್ಟ್ ಪ್ರತಿಯಲ್ಲಿ ಮಾಹಿತಿಯನ್ನು ನೀಡಲಾಗಿದೆ. ಉಳಿದಂತೆ, ಸೇವಾ ಕಾಲುವೆಯ ಸರ್ವೆ ಸಮೀಕ್ಷೆ ಮತ್ತು ವಿವರವಾಗ ಯೋಜನಾ ವರದಿಯ ತಯಾರಿಕೆ ಕಾರ್ಯವನ್ನು ಮೆ: ಎನ್.ಆರ್.ಎಸ್.ಸಿ., ಸಂಸ್ಥೆ ಮಾಡಲಾರದ ಕಾರಣ, ಈ ಕಾರ್ಯವನ್ನು ಪರಿಣಿತ ಸಂಸ್ಥೆಗಳಿಂದ ಮಾಡಿಸಲು ಟೆಂಡರ್ ಕರೆಯಲಾಗಿರುತ್ತದೆ. ಯೋಜನೆಯ ವಿವರವಾದ ವರದಿಯು ಲಭ್ಯವಾದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು.

ಸಣ್ಣ ಕೈಗಾರಿಕೆ

15 (29) ಶ್ರೀ ಸಂಪಂಗಿ. ಎನ್. (ಬಾಗೇಪಲ್ಲಿ): ಮಾನ್ಯ ಅರಣ್ಯ ಮತ್ತು ಸಣ್ಣ ಕ್ಯಾಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆ ಪ್ರಾರಂಭಿಸಲು ಎಲ್ಲೆಲ್ಲಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ;

ಆ) ಸಣ್ಣ ಕೈಗಾರಿಕೆ ಸ್ಥಾಪಿಸಲು ಸರ್ಕಾರವು ಯಾವು ಕ್ರಮವನ್ನು ಕೈಗೊಳ್ಳಲಾಗಿದೆ ಹಾಗೂ ಎಲ್ಲೆಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು (ತಾಲ್ಲೂಕುವಾರು ವಿವರ ಒದಗಿಸುವುದು)?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು):

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶಗಳ ಸ್ಥಾಪನೆಗಾಗಿ ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಚಿಂತಾಮಣಿ ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ) ರಾಜ್ಯದ ವಿವಿಧ ಪ್ರದೇಶಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನಾಧರಿಸಿ, ಕೆ.ಐ.ಎ.ಡಿ.ಬಿ ಮೂಲಕ ಪ್ರದೇಶಗಳನ್ನು ಹಾಗೂ ಕೆ.ಎಸ್.ಎಸ್.ಯ.ಡಿ.ಸಿ. ಮೂಲಕ ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿ ಮಾಡುವ ಮೂಲಕ ಕೈಗಾರಿಕೋದ್ಯಮಿಗಳು ಕೈಗಾರಿಕೆಗಳನ್ನು ಸ್ಥಾಪಿಸಲು ಅಗತ್ಯವಾದ ಕೈಗಾರಿಕಾ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, ಕೆ.ಎಸ್.ಎಸ್.ಐ.ಡಿ.ಸಿ.ಯು ಚಿಂತಾಮಣಿ, ಗೌರಿಬಿದನೂರು, ಶಿಡ್ಲಘಟ್ಟ ಮತ್ತು ಮುದ್ದೇನಹಳ್ಳಿಯಲ್ಲಿ ಕೈಗಾರಿಕಾ ವಸಹಾತುಗಳನ್ನು ಸ್ಥಾಪಿಸಿದೆ. ಇದಲ್ಲದೇ ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆ, ಚಿಂತಾಮಣಿ ತಾಲ್ಲೂಕಿನ ಕೈವಾರದ ಮಾಸ್ತೇನ ಹಳ್ಳಿ,

ಗುಡಿಬಂಡೆ ತಾಲ್ಲೂಕಿನ ಬೀಚಗಾನ ಹಳ್ಳಿ ಕ್ರಾಸ್‌ನಲ್ಲಿ ಹೊಸದಾಗಿ ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿ ಪಡಿಸುತ್ತಿದೆ.

ಕೆ.ಐ.ಡಿ.ಬಿ.ಯು ಸಹ ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಚಿಂತಾಮಣಿ ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಹೊಸದಾಗಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುತ್ತಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧಿಸಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೆ.ಎಸ್.ಎಸ್.ಐ.ಡಿ.ಸಿ. ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ವಸಾಹತುಗಳು.

S.I No	Place	Acres	Developed		Allotted		Working	
			Plots	Sheds	Sheds	Plots	Sheds	plots
1	Chintamani	21.42	6	20	20	6	10	3
2	Gowribidnur	5.47	25	8	8	24	8	8
3	Shidlaghatta	17.5	4	6	6	4	2	4
4	Muddenhalli	7.77	7	12	12	7	7	5
			42	46	46	41	27	20

ಕೆ.ಎಸ್.ಎಸ್.ಡಿ.ಸಿ. ನಿಗಮದಿಂದ ಹೊಸದಾಗಿ ಯೋಜಿಸಿರುವ ಕೈಗಾರಿಕಾ ವಸಾಹತುಗಳು

S.L. No.	Place	Acres
1	ಕುಡುಮಲಕುಂಟೆ, ಗೌರಿಬಿದನೂರು ತಾಲ್ಲೂಕು	48
2	ಮಾಸ್ತೇನ ಹಳ್ಳಿ, ಚಿಂತಾಮಣಿ ತಾಲ್ಲೂಕು	100
3	ಬೀಚಗಾನ ಹಳ್ಳಿ, ಗುಡಿಬಂಡೆ ತಾಲ್ಲೂಕು	70

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿ. ಈಗಾಗಲೇ ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ಪ್ರದೇಶಗಳು

ತಾಲ್ಲೂಕು	ಗ್ರಾಮ	ಎಕರೆ	ಒಟ್ಟು ನಿವೇಶನಗಳು	ಹಂಚಿಕೆಯಾಗಿರುವುದು
ಚಿಕ್ಕಬಳ್ಳಾಪುರ	ಜಡಲತಿಮ್ಮನಹಳ್ಳಿ, ಕಂದಾವಾರ	105	66	66
ಗೌರಿಬಿದನೂರು	ಕುಡಮಲಕುಂಟೆ	239	27	27

6th JUNE 2011

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿ. ಈಗ ಅಭಿವೃದ್ಧಿ ಪಡಿಸುತ್ತಿರುವ ಹೊಸ ಕೈಗಾರಿಕಾ ಪ್ರದೇಶಗಳು

ತಾಲ್ಲೂಕು	ಗ್ರಾಮ	ವಿಸ್ತೀರ್ಣ ಎ.ಗು.	ಭೂಸ್ವಾಧೀನದ ಹಂತ
ಬಾಗೇಪಲ್ಲಿ	ಬಾಗೇಪಲ್ಲಿ	192–00	ದಿ: 8–3–2007 ರಂದು ಕಲಂ 28(4)ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ
ಬಾಗೇಪಲ್ಲಿ	ಕೊಂಡರೆಡ್ಡಿಪಲ್ಲಿ, ಹೊಸಹುಡ್ಯ	809–31	ದಿನಾಂಕ: 26–12–2009 ರಂದು ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.
ಚಿಂತಾಮಣಿ	ಮಸ್ತೇನಹಳ್ಳಿ	592–27	ದಿ: 8–3–2010 ರಂದು ಕಲಂ 28(1) ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.
ಚಿಂತಾಮಣಿ	ಸೋಮಾಯಾಜಲ ಹಳ್ಳಿ, ಬಡಗಾರಹಳ್ಳಿ, ಕನಿಶೆಟ್ಟಿ ಹಳ್ಳಿ	791–33	ದಿ: 28–4–2010 ರಂದು ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.
ಗೌರಿಬಿದನೂರು	ಕುಡಮಲಕುಂಟೆ	453–04 84–31	ದಿ: 12–1–2011 ರಂದು ಕಲಂ 28(4)ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ದಿ: 12–1–2011ರಂದು ಕಲಂ 28(1) ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.